ಸಾಕ್ಷಿಯನ್ನು ದಿ: 10.02.2025 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-2

ಪಾಟೀಸವಾಲುಃ- ವಾದಿಗಳ ಪರ ಶ್ರೀ ಹೆಚ್‌ಎಸ ಕೆ ವಕೀಲರಿಂದ ಃ-

1. ನನ್ನ ತಂದೆ ಮಾದೇಗೌಡರಿಗೆ 3 ಜನ ಮಕ್ಕಳು. ಅವರುಗಳು ಮಾದೇಗೌಡ , ಶಿವಣ್ಣ , ಕೆಂಚೆಗೌಡ ಆಗಿರುತ್ತಾರೆ. ಈ ದಾವೆಯ 2ನೆ ಪ್ರತಿವಾದಿ ದಾವೆ ಬಾಕಿ ಇರುವಾಗ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮಾದೇಗೌಡರಿಗೆ ಪಿತ್ರಾರ್ಜಿತವಾಗಿ ಹಲವಾರು ಸ್ವತ್ತು ಬಂದಿತ್ತು ಎಂದರೆ ಸರಿ. ನನ್ನ ತಂದೆ ಮರಣನಂತರ ದಿಃ 2.11.2006 ರಂದು ಪಾಲುವಿಭಾಗ ಆಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ಅಂದು ಗೊಂದಲದಿಂದ ಆಗಿತ್ತು ಎಂದು ಹೇಳುತ್ತಾರೆ. ಸದರಿವಿಭಾಗ ಪತ್ರವನ್ನು ನಾವು ರದ್ದುಪಡಿಸಿರುವುದಿಲ್ಲ. ವಿಭಾಗಪತ್ರದ ಮೂಲಪ್ರತಿ ನನ್ನ ಬಳಿಇರುತ್ತದೆ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಲಾಗಿ ಅದರ ಮೂಲಪ್ರತಿ ಅವರ ಬಳಿ ಇರುವುದರಿಂದ ಜೆರಾಕ್ಸ ಕಾಪಿಯ ವಿಭಾಗ ಪತ್ರವನ್ನು ಸಾಕ್ಷಿ ಒಪ್ಪಿದ ಮೇರೆಗ ನಿಪಿ 5 ಎಂದು ಗುರುತಿಸಲಾಯಿತು. ವಿಭಾಗಪತ್ರದ ಮುಖಾಂತರ ಸ.ನಂ 52/2 ಎ ರಲ್ಲಿ ಒಟ್ಟು 38 ವಿಸ್ತೀರ್ಣದಲ್ಲಿ ನನಗೆ 20 ಗುಂಟೆ , ಶಿವಣ್ಣ ಅವರ ಹೆಸರಿಗೆ 18 ಗುಂಟೆ ಬಂದಿರುತ್ತದೆ ಎಂದರೆ ಸರಿ. ಸದರಿ ಹೇಳಿದ 20 ಗುಂಟೆ ಮತ್ತು 18 ಗುಂಟೆ ಒಟ್ಟು 38 ಗುಂಟೆ ನನ್ನ ಮತ್ತು ಶಿವಣ್ಣನವರ ಹೆಸರಿನಲ್ಲಿ ಜಂಟಿ ಖಾತೆಯಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಲಾಗಿ ಅದು ಸ ನಂ. 58/2 ಎ ಜಂಟಿ ಖಾತೆಯಲ್ಲಿದ್ದು ಒಪ್ಪಿಕೊಂಡು ಮೇರೆಗೆ ನಿಪಿ 6 ಎಂದು ಗುರುತಿಸಲಾಯಿತು.

2. ದಿಃ 14.03.2013 ರ ನೊಂದಾಯಿತ ಒಪ್ಪಂದದ ಕ್ರಯದ ಕರಾರು ಪತ್ರವನ್ನು ನನ್ನ ಹಿಸ್ಸೆಗೆ ಬಂದ 20 ಗುಂಟೆಯನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ಸಾಲದ ಭದ್ರತೆಗೆ ಬರೆದುಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನಿಪಿ 1 ರಲ್ಲಿ ನನ್ನ ಸಹಿ ಮತ್ತು 2ನೆ ಪ್ರತಿವಾದಿಯ ಸಹಿ ಇರುತ್ತದೆ ಎಂದರೆ ಸರಿ. ಕ್ರಯದ ಪ್ರತಿಫಲ 1 ಲಕ್ಷ ನಿಗದಿಪಡಿಸಿತ್ತು ಎಂದರೆ ಸರಿಯಲ್ಲ. ನಾನು 95 ಸಾವಿರ ಪಡೆದುಕೊಂಡಿರುತ್ತೇನೆ ಸಾಕ್ಷಿ ಹೇಳುತ್ತಾರೆ. ನಿಪಿ 1 ರಲ್ಲಿ ನಗದು ಕ್ರಯಕ್ಕೆ ಬರೆದಿದೆ ಎಂದು ಇರುತ್ತದೆ ಎಂದರೆ ಸರಿ ಆದರೆ ನಾನು ಭದ್ರತೆಗಾಗಿ ಬರೆದುಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

3. ದಿಃ 14.3.2013 ರಂದು ನಾನು ವಾದಿಯಿಂದ 95000/- ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಅದನ್ನು ಬಡ್ಡಿಗೆ ಪಡೆದುಕೊಂಡಿರುತ್ತೇನೆ. ನಾನು ಹೇಳಿದ ಹಾಗೆ ಸಾಲದ ಭದ್ರತೆಗೆ ಕೊಟ್ಟಿರುತ್ತೇನೆ ಎಂದು ನಿಪಿ 1 ರಲ್ಲಿ ನಮೂದು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ಈ ರೀತಿ ಮೇಲೆ ಹೇಳಿದ ಹಾಗೆ ನಮೂದಿಸಿದರೆ ಹಣ ಕೊಡವುದಿಲ್ಲ ಎಂದು ಹೇಳಿದ ಮೇರೆಗೆ ನೀಡಿರುವುದಿಲ್ಲ ಎಂದು ಹೇಳುತ್ತಾರೆ. ಕ್ರಯದ ಉಳಿದ ಮೊಬಲಗನ್ನು ನೊಂದಾಯಿತ ಮಾಡುವ ಸಮಯದಲ್ಲಿ ಕೊಡುತ್ತೇನೆ ಎಂದು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಬಿ ಎಸ್ ಸಿ ಪದವೀಧರ. ನಾನು ಯಾವ ದಾಖಲಾತಿಯನ್ನು ಸಹಿ ಮಾಡುವ ಮುನ್ನ ಪರಿಶೀಲಿಸಿ ಓದಿದ ನಂತರ ಸಹಿ ಮಾಡುತ್ತೇನೆ. ನನಗೆ ಸ್ಥಿರ ಸ್ವತ್ತು ಮತ್ತು ದಾಖಲಾತಿ ಬರೆಯುವಾಗ ಕಾನೂನಿನ ಅಂಶಗಳು ತಿಳಿದಿರುತ್ತದೆ ಎಂದರೆ ಸರಿ. ನಾನು ಕ್ರಯಪತ್ರ ಬರೆದುಕೊಟ್ಟಿರುವುದಿಲ್ಲ ಹಾಗೂ ಸಾಲದ ಭದ್ರತೆಗೆ ಬರೆದುಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯು ಜಂಟಿ ಖಾತೆಯಲ್ಲಿ ಇದ್ದು ನನ್ನ ಹೆಸರಿಗೆ ಪ್ರತ್ಯೇಕವಾಗಿ ಬಂದ ಮೇಲೆ ಕ್ರಯಪತ್ರವನ್ನು ಬರೆದುಕೊಡುತ್ತೇನೆ ಎಂದು ಆಶ್ವಾಸನೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹೆಸರಿಗಿರುವ ದಾವಾ ಆಸ್ತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಹೆಸರಿಗೆ ಖಾತೆ ಬದಲಾವಣೆ ತಡ ಆದ ಕಾರಣ ಕ್ರಯಪತ್ರ ಮಾಡಲುವಿಳಂಬವಾಗಿದ್ದು ಅದಕ್ಕೆ ವಾದಿಯವರು ನೋಟಿಸು ಕಳಿಸಿರುತ್ತಾರೆ ಎಂದರೆ ಸರಿ. ಸದರಿ ನೋಟಿಸಿಗೆ ನಾನು ನಿಪಿ 3 ರಂತೆ ಪ್ರತ್ಯುತ್ತರ ಕಳಿಸಿರುತ್ತೇನೆ ಎಂದರೆ ಸರಿ. ಪ್ರತ್ಯುತ್ತರ ನೋಟಿಸಿಗೆ ನಾನು ಸಹಿ ಮಾಡಿರುವುದಿಲ್ಲ ಎಂದರೆ ಸರಿ. 2 ನೆ ಪ್ರತಿವಾದಿಯ ಹೇಳಿಕೆಗೆ ಪೂರಕವಾಗಿ ನಾನು ಪ್ರತ್ಯುತ್ತರ ನೋಟಿಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ಕೊಟ್ಟ ಮಾಹಿತಿ ಮೇರೆಗೆ ವಕೀಲರು ಪ್ರತ್ಯುತ್ತರ ನೋಟಿಸು ಕಳಿಸಿರುತ್ತಾರೆ ಎಂದರೆ ಸರಿ. ನಾನು ಶುದ್ಧಕ್ರಯಪತ್ರ ಮಾಡಲು ವಿಳಂಬ ಮಾಡಿರುವುದರಿಂದ ವಾದಿಯು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೆ ಪ್ರತಿವಾದಿ ನನ್ನ ಹಿಸ್ಸೆಗೆ ಬಂದ ಮತ್ತು ಜಂಟಿ ಖಾತೆಯಲ್ಲಿ ಇದ್ದ ಆಸ್ತಿಯನ್ನು ನನ್ನಹೆಸರಿಗೆ ಮಾಡಲು 2 ನೆ ಪ್ರತಿವಾದಿ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

5. ಕ್ರಯದ ಕರಾರುಪತರ ಬರೆಯುವ ಪೂರ್ವದಲ್ಲಿ ದಾವಾ ಸ್ವತ್ತನ್ನು 3 ನೆ ವ್ಯಕ್ತಿಗೆ ಮಾರಾಟಮಾಡಲು ಪ್ರಯತ್ನ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ಅಣ್ಣನಮಗ ದಾವಾ ಸ್ವತ್ತನ್ನು ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಬೆಲೆಗೆ ಖರೀದಿ ಮಾಡುತ್ತೇನೆ ಎಂದು ನನ್ನ ಬಳಿ ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಸಾಲಕ್ಕೆ ಯಾವುದೇಕಾರಣದಿಂದಲು ವಾದಿಯನ್ನು ಸಂಪರ್ಕಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ವಾದಿಯಿಂದ ಸಾಲ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ನ್ನು ಕ್ರಯಪತ್ರವಾಗಿ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಕ್ರಯಪತ್ರ ಮಾಡುವ ಸಂದರ್ಭದಲ್ಲಿ ಸಾಕ್ಷಿದಾರರು ಇದ್ದು ಸಾಕ್ಷಿದಾರರಿಗೆ ವಿಷಯವು ತಿಳಿದಿರುತ್ತದೆ. ನಿಪಿ 1 ಕ್ಕೆ ಸಹಿ ಮಾಡಿರುವ ನಾಗರಾಜು ಮತ್ತು ಗೀತ ನಮ್ಮ ಸಂಬಂಧಿಕರು. ಸದರಿ ನಾಗರಾಜುವನ್ನು ಸಾಕ್ಷಿಯಾಗಿ ಮಾಡಲು ತೊಂದರೆ ಇರುವುದಿಲ್ಲ. ಸಾಲದ ಬಡ್ಡಿಯನ್ನು ಕಟ್ಟಿರುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ.

<u>ಮುಂದುವರಿದ ಪಾಟೀ ಸವಾಲನ್ನು ವಕೀಲರು ಸಮಯಾವಕಾಶ ಕೋರಿದ ಮೇರೆಗೆ ಸಮಯಾವಕಾಶ ನೀಡಲಾಯಿತು.</u>

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಮಳವಳ್ಳಿ.